ಶ್ರೀ ಆರ್. ಅಶೋಕ್ :– ದಯವಿಟ್ಟು ಅದನ್ನು record ನಿಂದ ತೆಗೆಸಿ.

ಅಧ್ಯಕ್ಷರು :– ಸುಮ್ಮನೆ ಒಂದು ಸಂಸ್ಥೆಯ ಗುರುಗಳ ಮೇಲೆ ಈ ರೀತಿ ಮಾಡುವುದಲ್ಲ, ಏನೋ FIR ಆಗಿದೆ, ಅದನ್ನು ಇಲ್ಲಿಗೆ ನಿಲ್ಲಿಸೋಣ. ಈಗ ವಿಧೇಯಕ ಮಂಡನೆ.

ಶ್ರೀ ಆರ್. ಅಶೋಕ್ :– ಪದೇ ಪದೇ ಅವರ ಹೆಸರನ್ನು ಏಕೆ ಇಲ್ಲಿ...

ಅಧ್ಯಕ್ಷರು :– ಆಯಿತಲ್ಲ, ಅವರು ಕೂಡ ಪದೇ ಪದೇ ಅವರ ಹೆಸರು ತರುವುದು ಸರಿಯಲ್ಲ ಎಂದು ಹೇಳಿದ್ದಾರೆ. ಅದಲ್ಲದೆ ಗುರುಗಳ ಬಗ್ಗೆ, ಸದನದಲ್ಲಿ ಇಲ್ಲದೇ ಇರುವವರ ಬಗ್ಗೆ ಪ್ರಸ್ತಾಪ ಮಾಡುವುದು ಸರಿಯಿಲ್ಲ. ಈಗ ವಿಧೇಯಕ ಮಂಡನೆ. ಕರ್ನಾಟಕ ಭೂ ಕಂದಾಯ ಮತ್ತು ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕ 2007.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ರಾಜ್ಯದ ಸಚಿವರೊಬ್ಬರು ರಾಜೀನಾಮೆ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು :– ನಾನು ನಿಮಗೆ ಅವಕಾಶ ಕೊಟ್ಟಿಲ್ಲ. ದಯಮಾಡಿ ಕುಳಿತುಕೊಳ್ಳಿ. ನಾನು ಜಗದೀಶ್ ಶೆಟ್ಟರ್‌ರವರನ್ನು ವಿಧೇಯಕ ಮಂಡನೆ ಮಾಡುವುದಕ್ಕೆ ಕರೆದಿದ್ದೇನೆ. No. I have not permitted you. You please take your seat.

ಶ್ರೀ ವಾಟಾಳ್ ನಾಗರಾಜ್ :– ಅವರಾದರೂ ಹೇಳಬೇಕು, ಇಲ್ಲವೆಂದರೆ ಸರ್ಕಾರವಾದರೂ ಹೇಳಬೇಕು.

ಅಧ್ಯಕ್ಷರು :– ಅದನ್ನು ಅವರು ಹೇಳುವ ಕಾಲದಲ್ಲಿ ಹೇಳುತ್ತಾರೆ, ಗೃಹಸಚಿವರು.....

ಶ್ರೀ ವಾಟಾಳ್ ನಾಗರಾಜ್ :– ತಾವು ಏಕೆ ಸಿಟ್ಟು ಮಾಡಿಕೊಳ್ಳುತ್ತೀರೋ ಗೊತ್ತಿಲ್ಲ.

(ಗೊಂದಲ)

ಅಧ್ಯಕ್ಷರು :– ರೆಡ್ಡಿಯವರೆ, ನೀವೆಲ್ಲ ಈ ರೀತಿ ಎದ್ದು ನಿಂತುಕೊಳ್ಳುವುದು ಸರಿಯಲ್ಲ. ನಾನು ಪದೇ ಪದೇ ಗಮನಿಸುತ್ತಿದ್ದೇನೆ, ಇಲ್ಲಿ ಇರುವಂತವರು ಪದೇ ಪದೇ ಎದ್ದು ನಿಂತುಕೊಳ್ಳುವುದು. ಇದು ಸರಿಯಲ್ಲ, I have taken it seriously.

ಶ್ರೀ ಎಸ್. ರಾಜೇಂದ್ರನ್ :– ಅದನ್ನು ಕೇಳಬೇಕಲ್ಲ....

ಅಧ್ಯಕ್ಷರು :– ಕುಳಿತುಕೊಳ್ಳಿ. ನೀವು ಏನು ಎದ್ದು ನಿಂತುಕೊಳ್ಳುತ್ತೀರಿ, ಅದರಲ್ಲಿ ನೂರಕ್ಕೆ ಹತ್ತು ಭಾಗ ಅದಕ್ಕೆ ನೀವೇ time ತೆಗೆದುಕೊಂಡಿರುತ್ತೀರಿ. ಇಲ್ಲಿ ಏನಾಗಿದೆಯೆಂದರೆ ನಿನ್ನೆ, ಇವತ್ತು ಏನೂ ನಡೆಯಲಿಲ್ಲ. ನಾಗರಾಜುರವರೆ ಅಲ್ಲಿ ತೀರ್ಮಾನ ಏನಾಗಿದೆ?

ಶ್ರೀ ವಾಟಾಳ್ ನಾಗರಾಜ್ :– ತಾವು ಏನೂ ಬೇಕಾದರೂ ಹೇಳಿ, ನಾವು ನಿಮ್ಮ ಬಗ್ಗೆ ಗೌರವ ಇಟ್ಟುಕೊಂಡಿದ್ದೇವೆ. ಈ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು....

ಅಧ್ಯಕ್ಷರು :– ನಾಳೆ ಪ್ರಸ್ತಾಪ ಮಾಡಿ, ನಾಳೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಈ ಸದನ ನಡೆಯುವಾಗ....

ಅಧ್ಯಕ್ಷರು :– ಆಗುವುದಿಲ್ಲರೀ.... ನಾಳೆ ಪ್ರಸ್ತಾಪ ಮಾಡಲಿ....

ಶ್ರೀ ವಾಟಾಳ್ ನಾಗರಾಜ್ :– ಈ ವಿಚಾರವನ್ನು ತಾವೇ ಕೇಳಬೇಕು, ನಾನಲ್ಲ. ನೀವು ಕೇಳುವುದನ್ನು ನಾವು ಕೇಳುತ್ತಿದ್ದೇವೆ.

ಅಧ್ಯಕ್ಷರು :– ಏಕೆ ಕೇಳಬೇಕು?

ಶ್ರೀ ವಾಟಾಳ್ ನಾಗರಾಜ್ :– ಶ್ರೀರಾಮುಲುರವರು ರಾಜೀನಾಮೆ ಕೊಟ್ಟಿರುವುದು ನಿಜವೇ ಎಂದು ಹೇಳಿಬಿಟ್ಟರೆ ಸಾಕು. ಇದು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು :– ಪತ್ರಿಕೆಯಲ್ಲಿ ಏನೋ ಏನೋ ಕೊಡುತ್ತಾರೆ, ಅದಕ್ಕೆ ಏಕೆ ನೀವು ಅಷ್ಟೊಂದು....

ಶ್ರೀ ಆರ್.ವಿ. ದೇಶಪಾಂಡೆ :– ಅವರು ರಾಜೀನಾಮೆ ಕೊಟ್ಟಿದ್ದರೆ ನೀವು ಹೇಳಿಬಿಡಿ. ಅವರು ಒಬ್ಬ Cabinet Minister ಇದ್ದಾರೆ...

ಅಧ್ಯಕ್ಷರು :– ಶ್ರೀರಾಮುಲುರವರು ಇಲ್ಲೇ ತಿರುಗಾಡುತ್ತಿದ್ದರಲ್ಲ. ನಾಗರಾಜುರವರೆ, ಅವರು ರಾಜೀನಾಮೆ ಕೊಟ್ಟಿದ್ದರೆ ಇಲ್ಲಿ ಏಕೆ ಬರುತ್ತಿದ್ದರು? ನಿಮ್ಮ ಜೊತೆಗೆ ಏನೋ ಮಾತನಾಡಿಕೊಂಡು ಬಂದರಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ತಾವು ಪತ್ರಿಕೆಯಲ್ಲಿ....

ಅಧ್ಯಕ್ಷರು :– ಏನೋ ಹಾಕಿದ್ದಾರೆ, ಇಲ್ಲೆ ಇದ್ದರಲ್ಲ, ಸ್ವಾಮಿ, ತಿರುಗಾಡುತ್ತಿದ್ದರು.

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೆ, ಅವರು ಇಲ್ಲೆ ತಿರುಗಾಡುತ್ತಿದ್ದರು ಎಂದಿರಲ್ಲ, ಅವರು MLA ಆಗಿ ಒಳಗೆ ಬರಬಹುದಲ್ಲ.

ಅಧ್ಯಕ್ಷರು :– ಬರಬಹುದು.

ಶ್ರೀ ಕೆ. ಶ್ರೀನಿವಾಸಗೌಡ :– ಹಾಗಾಗಿ ಬಂದಿರಬಹುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ :– ಮಾನ್ಯ ಅಧ್ಯಕ್ಷರೆ, ಪತ್ರಿಕೆಯಲ್ಲಿ ಬಂದಿರುವಂತಹ ವರದಿ ಬಗ್ಗೆ ಮಾನ್ಯ ವಾಟಾಳ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ, ಯಾವ ಮಂತ್ರಿ ರಾಜೀನಾಮೆ ಕೊಟ್ಟಿದ್ದಾರೆ ಎನ್ನುವಂತಹ ವರದಿ ಪತ್ರಿಕೆಯಲ್ಲಿ ಬಂದಿರುವಂತಹ ಸುದ್ದಿ ಏನಿದೆ, ಅದು ಸುದ್ದಿ ಅಷ್ಟೇ. ಅವರು ಯಾವುದೇ ರಾಜೀನಾಮೆ ಪತ್ರವನ್ನು ನಮಗೆ ತಲುಪಿಸಿಲ್ಲ. ಅದು ಪತ್ರಿಕೆಯ ಸುದ್ದಿ, ಅದರ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿಲ್ಲ. ನಾಯಕ ಸಮಾಜದ ಸ್ವಾಮೀಜಿಯವರು ಅಪಘಾತದಲ್ಲಿ ತೀರಿಕೊಂಡಿದ್ದಾರೆ, ಅವರ ಅಂತ್ಯಕ್ರಿಯೆ ಮಾಡುವಂತಹ ಕೆಲಸಗಳಿಗೆ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ನಾನೇ ಅವರನ್ನು ಕಳುಹಿಸಿಕೊಟ್ಟಿದ್ದೇನೆ. ಇದರ ಬಗ್ಗೆ ಯಾವುದೇ ಅನುಮಾನ ಬೇಕಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಹಾಗಾದರೆ ಪತ್ರಿಕೆಯವರು ಸುಳ್ಳು ಬರೆದಿದ್ದಾರೆ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು :– ಈಗ ಪತ್ರಿಕೆಯವರು ಬೇಕಾದಷ್ಟು ಬರೆದಿರುತ್ತಾರೆ, ಅದೆಲ್ಲಾ ವಿಚಾರ ಏಕೆ? ಈಗ ಮುಖ್ಯಮಂತ್ರಿಯವರು ಹೇಳಿದ್ದಾರಲ್ಲ. ಈಗ ರಾಜೀನಾಮೆ ಕೊಡುವುದು ಮುಖ್ಯಮಂತ್ರಿಗಳಿಗೆ ಅಲ್ಲವೇ? ಮುಖ್ಯಮಂತ್ರಿಗಳೇ ಅದನ್ನು deny ಮಾಡಿರುವಾಗ....

(ಗೊಂದಲ)

ಅಧ್ಯಕ್ಷರು :– ಅವರು statement ಮಾಡಿದ್ದಾರಲ್ಲ. ಇನ್ನೇನಿದೆ? ದಯಮಾಡಿ ಕುಳಿತುಕೊಳ್ಳಿ. ಗೃಹಮಂತ್ರಿಗಳು ಏನು ಹೇಳುತ್ತಾರೆಂದು ಕೇಳಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ :– ಅವರಿಗೆ ಸಾಂತ್ವನ ಹೇಳುವುದಕ್ಕೆ ಅವರ ಜೊತೆಗೆ ನಾನು ಹೋಗಿದ್ದೆ, ನಾನು ಪ್ರತಿಭಟನೆ ಮಾಡಿಲ್ಲ, ಯಾವುದೇ ರಾಜೀನಾಮೆಯನ್ನು ಕೊಟ್ಟಿಲ್ಲವೆಂದು ಶ್ರೀರಾಮುಲುರವರು ಪತ್ರಿಕಾ ಪ್ರಕಟಣೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಸರ್ಕಾರದ ಪರವಾಗಿ ಪಾರ್ಥಿವ ಶರೀರಕ್ಕೆ ನಮನವನ್ನು ಸಲ್ಲಿಸುವುದಕ್ಕೆ ಹೋಗಿದ್ದಾರೆ. ಅವರು ರಾಜೀನಾಮೆ ಕೊಟ್ಟಿಲ್ಲ.

ಶ್ರೀ ಸಿದ್ಧರಾಮಯ್ಯ :– ಅವರ ರಾಜೀನಾಮೆ accept ಮಾಡಿಕೊಂಡಿಲ್ಲ, ಮುಖ್ಯಮಂತ್ರಿಗಳಿಗೆ ಕಳುಹಿಸಿಲ್ಲ, ಅದು Governor ಗೆ ಹೋಗಿಲ್ಲವೆನ್ನುವುದು ಬೇರೆ ವಿಚಾರ. ಆದರೆ ಮಂತ್ರಿಗಳು ಧರಣಿಯಲ್ಲಿ ಕುಳಿತಿದ್ದಾರೆ. ಅದರ ಚಿತ್ರ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಎಂ.ಪಿ. ಪ್ರಕಾಶ್ :– ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ.

ಶ್ರೀ ಸಿದ್ಧರಾಮಯ್ಯ :– ಅವರ ಹೇಳಿಕೆ ಸುಳ್ಳು ಎಂದರೆ ಏನು ಮಾಡೋಣ? ಧರಣಿಯಲ್ಲಿ photo....

ಶ್ರೀ ಎಂ.ಪಿ. ಪ್ರಕಾಶ್ :– ಧರಣಿ ಮಾಡುತ್ತಿರುವ ಜನರ ಜೊತೆಗೆ ಈ ರೀತಿ ಉದ್ವಿಗ್ನ ವಾತಾವರಣ ಮಾಡುವುದು ಸರಿಯಾದುದಲ್ಲ. ದಯವಿಟ್ಟು ತಾವು ಅಲ್ಲಿಂದ ಎದ್ದು ಹೋಗಿ....

ಶ್ರೀ ಕೆ. ಶ್ರೀನಿವಾಸ ಗೌಡ :– ಮಾನ್ಯ ಅಧ್ಯಕ್ಷರೆ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಯಾವ school ನಲ್ಲಿ ಓದಿದ್ದಾರೆ, ಆ school ಗೆ ನಾವೂ ಹೋಗುತ್ತೇವೆ.

ಅಧ್ಯಕ್ಷರು :– ಅವರು ಹೇಳುತ್ತಿದ್ದಾರೆ, ನಾಗರಾಜುರವರೆ ತಾವು ವಿಷಯ ಪ್ರಸ್ತಾಪ ಮಾಡಿದ್ದೀರಿ. ಮುಖ್ಯಮಂತ್ರಿಗಳು ಹೇಳಿದ್ದಾರೆ. ಗೃಹಮಂತ್ರಿಗಳು ಇರುವಂತಹ ವಿಚಾರವನ್ನು ಹೇಳಿದ್ದಾರೆ. ಏಕೆ ಮತ್ತೆ ಪದೇ ಪದೇ ಹೇಳುತ್ತೀರಿ?

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ :– ಮಾನ್ಯ ಯಡಿಯೂರಪ್ಪನವರು ಬರೆದ ಕಾಗದ ಸಾಕ್ಷಿ, ಖರ್ಗೆ ಸಾಹೇಬರು ಈಗ ಎದ್ದಿದ್ದರು, ಇದನ್ನು ತಮಗೆ ಮತ್ತು ಮುಖ್ಯಮಂತ್ರಿಗಳಿಗೆ ಕೊಡುವುದಕ್ಕೆ ನೋಡಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಮಾನ್ಯ ಮುಖ್ಯಮಂತ್ರಿಗಳೇ, ಯಾರಾದರೂ ರಾಜೀನಾಮೆ ಕೊಟ್ಟರೆ ಅದನ್ನು ನೀವು accept ಮಾಡಿಬಿಡಿ. ಇನ್ನು ಮುಂದೆ ಯಾರೂ ರಾಜೀನಾಮೆ ಕೊಡುವುದಕ್ಕೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು :– ಈಗ ಜಗದೀಶ್ ಶೆಟ್ಟರ್‌ರವರು, ಕರ್ನಾಟಕ ಭೂ ಕಂದಾಯ ಮತ್ತು ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕ, 2007 ಅದನ್ನು ಮಂಡನೆ ಮಾಡುತ್ತಾರೆ. ದಯಮಾಡಿ ಎಲ್ಲರೂ ಸಹಕರಿಸಬೇಕು.

ಶ್ರೀ ಕೆ.ಎನ್. ರಾಜಣ್ಣ :– ಜಗದೀಶ್ ಶೆಟ್ಟರ್‌ರವರೆ ಒಂದು ನಿಮಿಷ ಇರಿ. ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ....

ಅಧ್ಯಕ್ಷರು :– ರಾಜಣ್ಣನವರೆ, Bill ಮಂಡನೆ ಮಾಡುತ್ತಿದ್ದಾರೆ ಕುಳಿತುಕೊಳ್ಳಿ.

ಶ್ರೀ ಕೆ.ಎನ್. ರಾಜಣ್ಣ :– ಮಾನ್ಯ ಅಧ್ಯಕ್ಷರೆ, ಕಾರ್ಯಕಲಾಪದ ಪಟ್ಟಿಯನ್ನು ನೋಡಿದ್ದೇವೆ. 3ನೇ ತಾರೀಖು ಪಂಚಾಯತ್ ರಾಜ್ Act ಗೆ ತಿದ್ದುಪಡಿಯನ್ನು

ಮಂಡನೆ ಮಾಡುತ್ತೇವೆಂದು ಈ ಸರ್ಕಾರ ಹಿಂದೆ ಒಂದು ಭರವಸೆಯನ್ನು ಕೊಟ್ಟಿತ್ತು. ಕಾರ್ಯಕಲಾಪದ ಪಟ್ಟಿಯಲ್ಲಿ ಅದು ಬಂದಿಲ್ಲ. ಅದಕ್ಕೆ ಸರ್ಕಾರ ಏನು ಪ್ರತಿಕ್ರಿಯೆ ನೀಡುತ್ತದೆಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು :– ಹೇಳುತ್ತಾರೆ, ಮೊದಲು ಇದನ್ನು ಮಂಡನೆ ಮಾಡಲಿ.

(5–30 ಗಂಟೆ)

ಶ್ರೀ ಕೆ.ಎನ್. ರಾಜಣ್ಣ :– ಮಾನ್ಯ ಅಧ್ಯಕ್ಷರೆ, ಈ ರೀತಿ ಮಾಡುವಂಥಾದ್ದು ಸರಿಯಲ್ಲ, ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು :– ಆಯಿತು.

ಶ್ರೀ ಕೆ.ಎನ್. ರಾಜಣ್ಣ :– ಒಂದು ನಿಮಿಷ ಕೇಳಿಬಿಡಿ, ಆಯಿತು ಎಂದರೆ ಏನು? ಏನು ಆಯಿತು?

ಅಧ್ಯಕ್ಷರು :– ಈಗ ಬಿಲ್ ಮಂಡನೆಯಾಗಲಿ, ಆನಂತರ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ. ನೀವು ಕುಳಿತುಕೊಳ್ಳಿ.

ಶ್ರೀ ಕೆ.ಎನ್. ರಾಜಣ್ಣ :– ಮಾನ್ಯ ಅಧ್ಯಕ್ಷರೆ, ಆಯಿತು ಬಿಡಿ, ಎಂದು ಹೇಳಿದರೆ ಏನಾಗುತ್ತದೆ? ಇದು ಸರಿಯಾದ ರೀತಿಯಾಗುವುದಿಲ್ಲ, ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು :– ಮಾನ್ಯ ರಾಜಣ್ಣನವರೆ, ಮಾನ್ಯ ಮಂತ್ರಿಯವರಿಗೆ ಬಿಲ್ ಮಂಡನೆ ಮಾಡಲು ನಾನು ಅವಕಾಶವನ್ನು ಕೊಟ್ಟಮೇಲೆ ಮಧ್ಯ ಮಧ್ಯದಲ್ಲಿ ನೀವು ಈ ರೀತಿಯಲ್ಲಿ ಮಾತನಾಡುತ್ತೀರಿ. ನೀವು ಹಿರಿಯ ಸದಸ್ಯರು ನೀವು ನನ್ನನ್ನೇ ಏನಾಯಿತು? ಎಂದು ನನ್ನನ್ನೆ ಕೇಳುತ್ತೀರಾ, ನಿಮ್ಮ ಮನಸ್ಸಿಗೆ ಬಂದುದೆಲ್ಲವನ್ನು ಕೇಳುತ್ತಿರುವುದಾ, ಯಾವಾಗ ಬೇಕಾದರೂ ಎದ್ದು ನಿಂತುಕೊಳ್ಳಬಹುದಾ? ನಮಗೆ ಸದನವನ್ನು ನಡೆಸುವುದಕ್ಕೆ ಅವಕಾಶ ಕೊಡಿ. ಏಕೆ ಈ ರೀತಿ ಮಾಡುತ್ತೀರಿ?

ಶ್ರೀ ಕೆ.ಎನ್. ರಾಜಣ್ಣ :– ಮಾನ್ಯ ಅಧ್ಯಕ್ಷರೆ, ತಾವು ಈ ರೀತಿ ಬೆದರಿಕೆ ಮಾಡುವಂಥಾದ್ದು....

ಅಧ್ಯಕ್ಷರು :– ಬೆದರಿಕೆ ಪ್ರಶ್ನೆಯಲ್ಲ, ನಾನು ಯಾರನ್ನು ಬೆದರಿಸುತ್ತಿಲ್ಲ, ಸಹಕರಿಸಿಯೆಂದು ಕೇಳುತ್ತಿದ್ದೇನೆ.

ಶ್ರೀ ಕೆ.ಎನ್. ರಾಜಣ್ಣ :– ಮಾನ್ಯ ಅಧ್ಯಕ್ಷರೆ, ನೀವು ನಮ್ಮ ರಕ್ಷಣೆಗೆ ಬರಬೇಕೆಂದು ಕೇಳುತ್ತೇನೆ.